2. ಪ್ರಕಟಣೆ

ವಿಷಯ: ಕಾರ್ಯಕಲಾಪಗಳ ಸಲಹಾ ಸಮಿತಿ

(1) ದಿನಾಂಕ:09.12.2014ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಈ ಮೂಲಕ ಸದನದ ಗಮನಕ್ಕೆ ತರಬಯಸುತ್ತೇನೆ. ದಿನಾಂಕ:15.12.2014 ಮತ್ತು 16.12.2014ರಂದು ಸದನದಲ್ಲಿ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿ ವಿಷಯಗಳ ಬಗ್ಗೆ ಚರ್ಚಿಸಲು ಅವಕಾಶವನ್ನು ನೀಡಲಾಗುವುದು. ಪ್ರಸ್ತುತ ಅಧಿವೇಶನದಲ್ಲಿ ವಿಧೇಯಕಗಳ ಮಂಡನೆ ಹಾಗೂ ಅಂಗೀಕಾರವಾಗಲಿದೆ. ಪೂರಕ ಅಂದಾಜುಗಳನ್ನು ಧನವಿಧೇಯಕಗಳು ಸೇರಿದಂತೆ ದಿನಾಂಕ:18.12.2014 ಮತ್ತು 19.12.2014 ರಂದು ತೆಗೆದುಕೊಳ್ಳಲಾಗುವುದು.

(2) ದಿನಾಂಕ:09.12.2014ರಂದು ಮಧ್ಯಾಹ್ನ 2:45ರ ಸಮಯದಲ್ಲಿ ಸುವರ್ಣವಿಧಾನಸೌಧದ ಹತ್ತಿರ ಪ್ರತಿಭಟನೆ ನಡೆಸುತ್ತಿದ್ದಂತಹ ಸಂದರ್ಭದಲ್ಲಿ ಕಾರ್ಕಳ ವಿಧಾನಸಭಾ ಕ್ಷೇತ್ರದ ಮಾನ್ಯ ಸದಸ್ಯರಾದ ಶ್ರೀ ವಿ.ಸುನೀಲ್ ಕುಮಾರ್ ಮತ್ತು ಶಿಗ್ಗಾಂವ್ ವಿಧಾನಸಭಾ ಕ್ಷೇತ್ರದ ಸದಸ್ಯರಾದ ಶ್ರೀ ಬಸವರಾಜ ಬೊಮ್ಮಾಯಿ ಅವರುಗಳನ್ನು K.P.Act ಕಲಂ:71ರ ಪ್ರಕಾರ ಪೊಲೀಸ್ ವಶಕ್ಕೆ ತೆಗೆದುಕೊಂಡು ನಂತರ ಅದೇ ದಿನ ಸಂಜೆ 4:00 ಗಂಟೆಗೆ ಬಿಡುಗಡೆ ಮಾಡಲಾಗಿರುತ್ತದೆ ಎಂದು ಪೊಲೀಸ್ ಕಮೀಷನರ್ ಬೆಳಗಾವಿ ನಗರ ಇವರು ತಿಳಿಸಿರುತ್ತಾರೆಂದು ಈ ಮೂಲಕ ಸದನದ ಗಮನಕ್ಕೆ ತರಲಾಗಿದೆ.

ಶ್ರೀ ವಿ.ಸುನೀಲ್ ಕುಮಾರ್: ಮಾನ್ಯ ಅಧ್ಯಕ್ಷರೆ, ಕಸ್ತೂರಿ ರಂಗನ್ ವರದಿ ಬಗ್ಗೆ ದಯಮಾಡಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಧ್ಯಕ್ಷರೆ, ಕಸ್ತೂರಿ ರಂಗನ್ ವರದಿ ಬಗ್ಗೆ ಈಗ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

(ಈ ಹಂತದಲ್ಲಿ ಬಿಜೆಪಿ ಪಕ್ಷದ ಹಲವು ಮಾನ್ಯ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು: ಇದು ಬಹಳ ಗಂಭೀರವಾದ ವಿಚಾರ. ಅದನ್ನು ನಿಯಮ 69ರ ಪ್ರಕಾರ ಚರ್ಚೆ ಮಾಡಲಿಕ್ಕೆ ನಾಳೆ ನಿಮಗೆ ಖಂಡಿತವಾಗಿ ಅವಕಾಶ ಕೊಡುತ್ತೇನೆ.

ಶ್ರೀ ಪಿ.ಆರ್.ಸುಧಾಕರ್‌ಲಾಲ್: ಅಧ್ಯಕ್ಷರೆ, ದಿನವೂ ಇದೇ ರೀತಿ ಆದರೆ ನಾವು ನಮ್ಮ ಕ್ಷೇತ್ರದ ಜನರ ಕಷ್ಟ ಸುಖವನ್ನು ಯಾರ ಹತ್ತಿರ ಹೇಳಿಕೊಳ್ಳೋಣ. ನಾವೆಲ್ಲಾ ಇಲ್ಲಿ ಏಕಿರಬೇಕು?

ಅಧ್ಯಕ್ಷರು: ಕಾಗೇರಿಯವರೆ ನಿಮಗೆಷ್ಟು ಆತಂಕ ಇದೆಯೋ ಅಷ್ಟೇ ಆತಂಕ ನಮಗೂ ಇದೆ. ಇದರ ಬಗ್ಗೆ ವಿಸ್ತೃತವಾದ ಚರ್ಚೆಗೆ ನಾನು ಅವಕಾಶವನ್ನು ಕೊಡುತ್ತೇನೆ. ನಾಳೆಯೇ ತೆಗೆದುಕೊಳ್ಳೋಣ. ಸಮಯ ವ್ಯರ್ಥ ಮಾಡಬೇಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾವು ಈ ವಿಚಾರದ ಬಗ್ಗೆ ನಿಲುವಳಿ ಸೂಚನೆ ಕೊಟ್ಟಿರುವುದರಿಂದ ತಾವು ಅದಕ್ಕೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಸಮಯ ವ್ಯರ್ಥವಾಗುತ್ತದೆ. ಇದು ನಮಗೂ ನಿಮಗೂ ಎಲ್ಲರಿಗೂ ಗೊತ್ತಿರುವ ವಿಚಾರ. ಇದರ ಬಗ್ಗೆ ನಾವೇನೂ ಮುಚ್ಚುಮರೆ ಮಾಡುವ ಅಗತ್ಯ ಇಲ್ಲ. ಇಂಥ ವಿಚಾರಕ್ಕೆ ನಾವು ಒಂದು ತೀರ್ಮಾನ ತೆಗೆದುಕೊಳ್ಳುವ ಅವಶ್ಯಕತೆ ಇದೆ. ದಯವಿಟ್ಟು ನಾಳೆ ಅದರ ಬಗ್ಗೆ ನಿಯಮ 69ರ ಪ್ರಕಾರ ಚರ್ಚೆ ಮಾಡೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಧ್ಯಕ್ಷರೆ, ನಾಳೆ ಪ್ರಶ್ನೋತ್ತರ ಆದಮೇಲೆ preliminary submission ಮಾಡಲಿಕ್ಕೆ permission ಕೊಡಿ. ನಂತರ ಆ ಬಗ್ಗೆ ಚರ್ಚೆ ಮಾಡುತ್ತೇವೆ.